ಶ್ರೀ ಆರ್. ಅಶೋಕ್ (ಉಪ ಮುಖ್ಯಮಂತ್ರಿಗಳು ಗೃಹ ಮತ್ತು ಸಾರಿಗೆ ಸಚಿವರು) :

ಅ) ಹೌದು.

ಆ) ಮತ್ತು ಇ) ಈ) ಉ)

2012–13ನೇ ಸಾಲಿನ ಆಯವ್ಯಯದ ಭಾಷಣದಲ್ಲಿ ಬೆಂಗಳೂರು ನಗರದಲ್ಲಿ 3 ಸಂಚಾರಿ ಪೊಲೀಸ್ ಠಾಣೆಗಳು ಹಾಗೂ ರಾಜ್ಯದ ಇತರೆ ಜಿಲ್ಲೆಗಳಲ್ಲಿ 07 ಹೊಸ ಪೊಲೀಸ್ ಠಾಣೆಗಳನ್ನು ಸೇರಿದಂತೆ ಒಟ್ಟು 10 ಪೊಲೀಸ್ ಠಾಣೆಗಳನ್ನು ಪ್ರಾರಂಭಿಸಲು ಘೋಷಿಸಲಾಗಿದೆ. ಅದರಂತೆ ಪ್ರಸ್ತಾವನೆಯನ್ನು ಪರಿಶೀಲಿಸಿ ಪೊಲೀಸ್ ಠಾಣೆಯನ್ನು ತೆರೆಯಲು ಮಂಜೂರಾತಿ ನೀಡಿ ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 91 ಪಿಓಪಿ 2012 ದಿನಾಂಕ: 03/07/2012ನ್ನು ಹೊರಡಿಸಲಾಗಿದೆ.

ರಾಜ್ಯದಲ್ಲಿ ಬಹಳಷ್ಟು ಕಡೆ ಪೊಲೀಸ್ ಠಾಣೆ ಹಾಗೂ ಸಂಚಾರಿ ಪೊಲೀಸ್ ಠಾಣೆ ಸ್ಥಾಪನೆ ಮಾಡಲು ಕೋರಿಕೆಗಳು ಇರುತ್ತದೆ. ರಾಜ್ಯದ ಸಂಪನ್ಮೂಲ ಕೊರತೆಯಿಂದ ಒಂದೇ ಹಂತದಲ್ಲಿ ಸ್ಥಾಪಿಸಲು ಸಾಧ್ಯವಾಗುವುದಿಲ್ಲ. ಹಂತ ಹಂತವಾಗಿ ಸ್ಥಾಪನೆ ಮಾಡಲಾಗುತ್ತದೆ. ಆದ್ದರಿಂದ ಸಂಪನ್ಮೂಲದ ಲಭ್ಯತೆಗೆ ಅನುಗುಣವಾಗಿ ಹಾಗೂ ಆಧ್ಯತೆಯ ಮೇರೆಗೆ ಸಿಂಧನೂರು ನಗರಕ್ಕೆ ಹೊಸ ಸಂಚಾರಿ ಪೊಲೀಸ್ ಠಾಣೆಯನ್ನು ಸ್ಥಾಪಿಸುವ ಕುರಿತು ಪರಿಶೀಲಿಸಲಾಗುವುದು.

ವಿಧಾನ ಸೌಧ, ವಿಕಾಸ ಸೌಧ ಮತ್ತು ಬಹುಮಹಡಿ ಕಟ್ಟಡಗಳಿಗೆ ಅಗ್ನಿಶಾಮಕ ಇಲಾಖೆಯಿಂದ N.O.C. ಪಡೆಯುವುದು

692 (275) ಶ್ರೀ ಅಶೋಕ್ ಮಹದೇವಪ್ಪ ಪಟ್ಟಣ (ರಾಮದುರ್ಗ) : ಮಾನ್ಯ ಉಪ ಮುಖ್ಯಮಂತ್ರಿಗಳು ಗೃಹ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ವಿಧಾನಸೌಧ, ವಿಕಾಸಸೌಧ ಮತ್ತು ಬಹುಮಹಡಿ ಕಟ್ಟಡಗಳಿಗೆ ಅಗ್ನಿಶಾಮಕ ಇಲಾಖೆಯ ನಿರಾಕ್ಷೇಪಣಾ ಪತ್ರವನ್ನು ಪಡೆಯಲಾಗಿದೆಯೇ?

ಆ) ಇತ್ತೀಚೆಗೆ ಮಹಾರಾಷ್ಟ್ರದಲ್ಲಿ ಉಂಟಾದ ಅಗ್ನಿ ದುರಂತದಂತಹ ಪ್ರಕರಣಗಳನ್ನು ತಪ್ಪಿಸಲು ಸರಕಾರವು ಯಾವ ಯಾವ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದೆ?

ಶ್ರೀ ಆರ್. ಅಶೋಕ್ (ಉಪ ಮುಖ್ಯ ಮಂತ್ರಿಗಳು ಹಾಗೂ ಗೃಹ ಮತ್ತು ಸಾರಿಗೆ ಸಚಿವರು) :

ಅ) ವಿಧಾನಸೌಧದಲ್ಲಿ ಅಗ್ನಿನಿವಾರಣೆ ಬಗ್ಗೆ ತಿಳುವಳಿಕೆ ಮೂಡಿಸಲು ಹಾಗೂ ಅಗ್ನಿ ಅನಾಹುತವಾದ ಸಂದರ್ಭದಲ್ಲಿ ಕೂಡಲೇ ಓಗೂಡಲು ದಿನಾಂಕ:04–03–1982 ರಂದು 2 ಸಹಾಯಕ ಅಗ್ನಿಶಾಮಕ ಠಾಣಾಧಿಕಾರಿ ಹಾಗೂ 6 ಅಗ್ನಿಶಾಮಕರನ್ನೊಳಗೊಂಡ ತುಕಡಿಯೊಂದನ್ನು ವಿಧಾನಸೌಧದ ದಕ್ಷಿಣ ಭಾಗದ ಪ್ರವೇಶದ್ವಾರದ ಪಕ್ಕ ಸ್ಥಾಪಿಸಲಾಗಿದೆ.

ಅಗ್ನಿಶಾಮಕ ಹಾಗೂ ತುರ್ತು ಸೇವಾ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆಯುವ ಆದೇಶವನ್ನು ನಗರಾಭಿವೃದ್ಧಿ ಇಲಾಖೆಯವರು ದಿನಾಂಕ: 13–04–1984ರಂದು ಹೊರಡಿಸಿದ್ದು ವಿಧಾನಸೌಧ ಕಟ್ಟಡವನ್ನು ಮೊದಲೇ ನಿರ್ಮಿಸಿರುವುದರಿಂದ ಕಟ್ಟಡದ ಪ್ರಾಮುಖ್ಯತೆಯನ್ನು ಗಮನದಲ್ಲಿಟ್ಟುಕೊಂಡು ದಿನಾಂಕ: 15–03–2003 ರಂದು ಅಗ್ನಿಶಮನ ಉಪಕರಣಗಳ ಅಳವಡಿಕೆ ಬಗ್ಗೆ ಶಿಫಾರಸ್ಸು ಪತ್ರವನ್ನು DPAR ಹಾಗೂ PWD ಇಲಾಖೆಗಳಿಗೆ ನೀಡಲಾಗಿದೆ.

ವಿಕಾಸಸೌಧ

ವಿಕಾಸಸೌಧದ ನಿರ್ಮಾಣದ ಮೊದಲು ಅಂದರೆ ದಿನಾಂಕ: 27–02–2003ರಂದು ಕಾನೂನಿನನ್ವಯ ಅಗ್ನಿಶಾಮಕ ಹಾಗೂ ತುರ್ತು ಸೇವಾ ಇಲಾಖೆಯಿಂದ ಕಟ್ಟಡ ನಿರ್ಮಾಣಕ್ಕೆ ನಿರಾಕ್ಷೇಪಣಾ ಪತ್ರ ನೀಡಲಾಗಿದೆ. ಲಿಫ್ಟ್ ಲಾಬಿಗಳನ್ನು ಬೇಸ್‌ಮೆಂಟ್ ಹಂತದಲ್ಲಿ ಎನ್‌ಕ್ಲೋಸ್ ಮಾಡುವುದು ಹಾಗೂ ಸರ್ವೀಸ್ ಡಕ್ಟ್‌ಗಳನ್ನು ಸೀಲ್ ಮಾಡುವುದು ಹೊರತು ಪಡಿಸಿ ಇತರ ಎಲ್ಲಾ ಶಿಫಾರಸ್ಸುಗಳನ್ನು ಕಟ್ಟಡದಲ್ಲಿ ಅಳವಡಿಸಲಾಗಿದೆ. ಈ ಶಿಫಾರಸ್ಸುಗಳು ಅನುಷ್ಠಾನದ ನಂತರ ಅಗ್ನಿಶಾಮಕ

ಹಾಗೂ ತುರ್ತು ಸೇವಾ ಇಲಾಖೆಯ ಕ್ಲಿಯರೆನ್ಸ್ ಪತ್ರವನ್ನು ನೀಡಲಾಗುವುದು.

ಬಹುಮಹಡಿ ಕಟ್ಟಡಗಳ ಸಂಕೀರ್ಣ

ಬಹುಮಹಡಿ ಕಟ್ಟಡ ಸಂಕೀರ್ಣದಲ್ಲಿ ಅಗ್ನಿನಿವಾರಣೆ ಬಗ್ಗೆ ತಿಳುವಳಿಕೆ ಮೂಡಿಸಲು ಹಾಗೂ ಅಗ್ನಿ ಅನಾಹುತವಾದ ಸಂದರ್ಭದಲ್ಲಿ ಕೂಡಲೇ ಓಗೊಡಲು ದಿನಾಂಕ: 27–09–1991 ರಂದು 1 ಸಹಾಯಕ ಅಗ್ನಿಶಾಮಕ ಠಾಣಾಧಿಕಾರಿ, 2 ಪ್ರಮುಖ ಅಗ್ನಿಶಾಮಕ ಹಾಗೂ 5 ಅಗ್ನಿಶಾಮಕರನ್ನೊಳಗೊಂಡ ತುಕಡಿಯೊಂದನ್ನು ಗೇಟ್ ಸಂಖ್ಯೆ–2 ರ ತಳಮಹಡಿಯಲ್ಲಿ ಸ್ಥಾಪಿಸಲಾಗಿದೆ. ಅಗ್ನಿಶಾಮಕ ಹಾಗೂ ತುರ್ತು ಸೇವಾ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆಯುವ ಆದೇಶವನ್ನು ನಗರಾಭಿವೃದ್ಧಿ ಇಲಾಖೆಯವರು ದಿನಾಂಕ: 13–04–1984ರಂದು ಹೊರಡಿಸಿದ್ದು ಬಹುಮಹಡಿ ಸಂಕೀರ್ಣದಲ್ಲಿ ಕಟ್ಟಡವನ್ನು ಈ ಮೊದಲೇ ನಿರ್ಮಿಸಿರುವುದರಿಂದ ಕಟ್ಟಡದ ಪ್ರಾಮುಖ್ಯತೆಯನ್ನು ಗಮನದಲ್ಲಿಟ್ಟಿಕೊಂಡು ಅಗ್ನಿಶಮನ ಉಪಕರಣಗಳ ಅಳವಡಿಕೆ ಬಗ್ಗೆ ಶಿಫಾರಸ್ಸು ಪತ್ರವನ್ನು DPAR ಹಾಗೂ PWD ಇಲಾಖೆಗಳಿಗೆ ನೀಡಲಾಗಿದೆ.

ಆ) ದಿನಾಂಕ: 26–06–2012 ಮತ್ತು 29–06–2012 ರಂದು ವಿಕಾಸ ಸೌಧ, ವಿಧಾನಸೌಧ ಹಾಗೂ ಬಹುಮಹಡಿ ಕಟ್ಟಡಗಳನ್ನು ಅಗ್ನಿಶಾಮಕ ಮತ್ತು ಇಲಾಖೆಯ ಎಲ್ಲಾ ಹಿರಿಯ ಅಧಿಕಾರಿಗಳು, ಲೋಕೋಪಯೋಗಿ ಇಲಾಖೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಹಾಗೂ ಪೊಲೀಸ್ ಇಲಾಖೆಯ ಅಧಿಕಾರಿಗಳೊಂದಿಗೆ ಪರೀಕ್ಷಿಸಿ ಅಳವಡಿಸಬೇಕಾದ ಅಗ್ನಿಶಮನ ಮತ್ತು ಅಗ್ನಿನಿವಾರಣೆ ಉಪಕರಣ, ಸಿಬ್ಬಂದಿಗಳಿಗೆ ತರಬೇತಿ ಇತ್ಯಾದಿ ಬಗ್ಗೆ ಚರ್ಚಿಸಿ ಸಭೆಯ ನಡವಳಿಯನ್ನು ಸಂಬಂಧಪಟ್ಟವರಿಗೆ ಕಳಹಿಸಲಾಗಿದೆ.

ಇದಲ್ಲದೆ ಸಚಿವಾಲಯದ ಸಂಕೀರ್ಣದಲ್ಲಿರುವ ಎಲ್ಲಾ ಕಟ್ಟಡಗಳ ಸುರಕ್ಷತೆಗಾಗಿ ಸರ್ಕಾರವು ಆದೇಶ ಸಂಖ್ಯೆ:ಒಇ80 ಕಅಸೇ 2009, ದಿನಾಂಕ: 4–01–2010 ರಲ್ಲಿ 4 ವಾಹನ ಹಾಗೂ 24 ಸಿಬ್ಬಂದಿಗಳನ್ನೊಳಗೊಂಡ ಪೂರ್ಣ ಪ್ರಮಾಣದ ಅಗ್ನಿಶಾಮಕ ಠಾಣೆಯೊಂದನ್ನು ಮಂಜೂರು ಮಾಡಿದ್ದು ಪ್ರಸ್ತುತ ವಿಕಾಸಸೌಧ ಹಾಗೂ ಬಹುಮಹಡಿ ಕಟ್ಟಡ ಸಂಕೀರ್ಣದ ಮಧ್ಯ ಇರುವ ಸ್ಥಳದಲ್ಲಿ ರೂ. 150ಲಕ್ಷ ವೆಚ್ಚದಲ್ಲಿ ಪೂರ್ಣ ಪ್ರಮಾಣದ ಅಗ್ನಿಶಾಮಕ ಠಾಣಾ ಕಟ್ಟಡವನ್ನು ಲೋಕೋಪಯೋಗಿ ಇಲಾಖೆ ಯವರು ನಿರ್ಮಿಸುತ್ತಿರುವರು. ನಿರ್ಮಾಣ ಪೂರ್ಣಗೊಂಡ ಕೂಡಲೇ ಅಗ್ನಿಶಾಮಕ ಠಾಣೆಯನ್ನು ಪ್ರಾರಂಭಿಸಲಾಗುವುದು.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಹಾಸ್ಟೆಲ್‌ಗಳು

756 (241) ಸುರೇಶ್ ಗೌಡ (ನಾಗಮಂಗಲ) : ಮಾನ್ಯ ಸಮಾಜ ಕಲ್ಯಾಣ ಮತ್ತು ಬಂಧೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಎಷ್ಟು ಪ್ರಾಥಮಿಕ ಶಿಕ್ಷಣ ಪ್ರೌಢಶಿಕ್ಷಣ, ಉನ್ನತ ಶಿಕ್ಷಣ ಹಾಗೂ ವೈದ್ಯಕೀಯ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹಾಸ್ಟೆಲ್‌ಗಳನ್ನು ನಡೆಸಲಾಗುತ್ತಿದೆ;

ಆ) ಎಲ್ಲಾ ಹಾಸ್ಟೆಲ್‌ಗಳಲ್ಲೂ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ.

ಇ) ಎಲ್ಲಾ ಹಾಸ್ಟೆಲ್‌ಗಳಿಂದ ಎಷ್ಟು ಜನ ವಿದ್ಯಾರ್ಥಿಗಳನ್ನು ಸೇರ್ಪಡೆ ಮಾಡಿಕೊಳ್ಳಲು ಅವಕಾಶ ಇರುತ್ತದೆ: ಎಷ್ಟು ಜನ ಗ್ರಾಮೀಣ ವಿದ್ಯಾರ್ಥಿಗಳು ಈ ಹಾಸ್ಟೆಲ್‌ಗಳಲ್ಲಿ ವಾಸಿಸುತ್ತಿದ್ದಾರೆ:

ಈ) ಈ ಹಾಸ್ಟೆಲ್‌ಗಳ ನಿರ್ವಹಣೆಗಾಗಿ ಕಳೆದ 3 ವರ್ಷಗಳಲ್ಲಿ ಎಷ್ಟು ಹಣ ವೆಚ್ಚ ಮಾಡಲಾಗಿದೆ?